# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 909 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 21-09-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ: | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಜೇವರ್ಗಿ ಸಂಕೇಶ್ವರ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿ ಘೋಷಿಸಲಾಗಿದೆಯೇ; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ವರದಿಸಿರುವಂತೆ ರಾಹೆ-50 ಕಿ.ಮೀ.195.00 (ವಿಜಯಪುರ) ರಿಂದ ಕಿ.ಮೀ.319.00 (ಜೇವರ್ಗಿ) ವರೆಗೆ ಇವರ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ. ಹಾಗೂ ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಎಂದು ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆ S.O.No.242(E) ದಿನಾಂಕಃ25-02-2004ರ ಪ್ರಕಾರ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿ ಘೋಷಿಸಲಾಗಿದೆ.<br><br>ಮುಂದುವರೆದು, ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಯ ಭಾಗವಾದ ವಿಜಯಪುರದಿಂದ ಸಂಕೇಶ್ವರವರೆಗೆ (ವಿಜಯಪುರದಿಂದ ಗೊಟೂರವರೆಗೆ) ರಾಷ್ಟ್ರೀಯ ಹೆದ್ದಾರಿ ನಂ.548ಬಿ ಎಂದು ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆ S.O.No.5322(E) ದಿನಾಂಕಃ21-12-2021ರ ಪ್ರಕಾರ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿ ಘೋಷಿಸಲಾಗಿದೆ. |
| ಆ | ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಕಾಮಗಾರಿಗಳು ಚಾಲನೆಯಾಗಿವೆಯೇ; ಕಾಮಗಾರಿ ಚಾಲನೆಯಾಗದಿರಲು ಕಾರಣಗಳೇನು; ಕಾಮಗಾರಿ ಪ್ರಾರಂಭಿಸಿ ಮುಕ್ತಾಯಗೊಳಿಸಲು ಇರುವ ಕಾಲಮಿತಿ ಏನು; | 1) ಜೇವರ್ಗಿಯಿಂದ ವಿಜಯಪುರ ರಸ್ತೆ ನಿರ್ಮಾಣ ಕಾಮಗಾರಿ 2019ರಲ್ಲಿ ಮುಕ್ತಾಯಗೊಂಡಿದ್ದು, ಸದ್ಯ ಕಾಮಗಾರಿಯು O&M ಅಡಿ ಇರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.<br><br>2) ರಾಷ್ಟ್ರೀಯ ಹೆದ್ದಾರಿ ವಲಯದಡಿ ಕಿಮೀ 0.00 (ವಿಜಯಪುರ ಸುಭಾಷಚಂದ್ರ ವೃತ್ತ) ದಿಂದ ಕಿಮೀ 80.00 (ಮುರಗುಂಡಿ) ವರೆಗೆ ಕಾಮಗಾರಿಯು ದಿನಾಂಕ:31.03.2021 ರಂದು ಮಂಜೂರಾಗಿದ್ದು, ರವಿ ಇನ್‌ಫ್ರಾ ಬಿಲ್ಡಕಾನ್, ಸಾ: ಉದಯಪುರ ಇವರಿಗೆ ಗುತ್ತಿಗೆ ವಹಿಸಲಾಗಿದೆ. ಪ್ರಸ್ತುತ ಕಾಮಗಾರಿಯ ಪೂರ್ವ ನಿರ್ಮಾಣ ಚಟುವಟಿಕೆಗಳು (Pre construction activities) ನಡೆಯುತ್ತಿದ್ದು ಕಾಮಗಾರಿ ಮುಕ್ತಾಯಗೊಳಿಸಲು 2 ವರ್ಷಗಳ ಕಾಲಮಿತಿ ನೀಡಲಾಗಿರುತ್ತದೆ. |

--2

<table>
<tr><td></td><td></td><td>3) ಕಿಮೀ 80.00 ರಿಂದ 169.00 ರವರೆಗೆ 2022-23ನೇ ಸಾಲಿನ ವಾರ್ಷಿಕ ಯೋಜನೆಯಡಿ ಕಾಮಗಾರಿಯು ಮಂಜೂರಾಗಿದ್ದು ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಲಾಗುತ್ತಿದೆ. ಈಗಾಗಲೇ ಭೂ-ಸಾರಿಗೆ ಮಂತ್ರಾಲಯ, ನವದೆಹಲಿ ಇವರಿಂದ ದಿನಾಂಕ:25.08.2022 ರಂದು ಪಂಕ್ತೀಕರಣ ಅನುಮೋದನೆ ಯಾಗಿದ್ದು, ಶೀಘ್ರದಲ್ಲಿಯೇ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಿ, ಅನುಮೋದನೆ ಪಡೆದುಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.</td></tr>
<tr><td>ಇ</td><td>ಜೇವರ್ಗಿ ಸಂಕೇಶ್ವರ ರಸ್ತೆಯು ಎಷ್ಟು ಕಿ.ಮೀ. ವ್ಯಾಪ್ತಿ ಹೊಂದಿದೆ; ಯಾವ ಯಾವ ಜಿಲ್ಲೆಗಳ ಮೂಲಕ ಹಾದುಹೋಗುತ್ತವೆ? (ಸಂಪೂರ್ಣ ವಿವರ ನೀಡುವುದು)</td><td>ಜೇವರ್ಗಿ ಸಂಕೇಶ್ವರ ರಸ್ತೆಯು ಒಟ್ಟು 293.00 ಕಿಮೀ ಇದ್ದು ವಿವರ ಈ ಕೆಳಗಿನಂತೆ ಇರುತ್ತದೆ.
<table>
<tr><th>ಕ್ರ.ಸಂ.</th><th>ಜಿಲ್ಲೆ</th><th>ರಸ್ತೆಯ ಉದ್ದ ಕಿ.ಮೀ ಗಳಲ್ಲಿ</th><th>ರಾಷ್ಟ್ರೀಯ ಹೆದ್ದಾರಿ ಸಂಖ್ಯೆ</th></tr>
<tr><td>1</td><td>ಕಲಬುರ್ಗಿ</td><td>32.70</td><td>218ಇ (50)</td></tr>
<tr><td>2</td><td>ವಿಜಯಪುರ</td><td>91.30+34.00 = 125.30</td><td>218ಇ(50) ಹಾಗು 548ಬಿ</td></tr>
<tr><td>3</td><td>ಬೆಳಗಾಂವ</td><td>135.00</td><td>548ಬಿ</td></tr>
<tr><td></td><td>ಒಟ್ಟು</td><td>**293.00**</td><td></td></tr>
</table>
ಜೇವರ್ಗಿ ಸಂಕೇಶ್ವರ ರಸ್ತೆಯು ಜೇವರ್ಗಿ ಉಪವಿಭಾಗಕ್ಕೆ 37.20 ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ ಮತ್ತು ಈ ರಸ್ತೆಯು ಕಲಬುರಗಿ, ಬಿಜಾಪೂರ ಮತ್ತು ಬೆಳಗಾವಿ ಜಿಲ್ಲೆಗಳಿಂದ ಹಾಯ್ದುಹೊಗುತ್ತದೆ.</td></tr>
</table>

ಕಡತ ಸಂಖ್ಯೆ: ಲೋಇ 333 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು